ಕೃತಿಗಳು ಭಾಷಾಂತರವಾಗಿದ್ದರೂ, ಭಾರತದಲ್ಲಿ ಭೈರಪ್ಪನವರಿಗೆ ಇರುವ ಓದುಗರ ವ್ಯಾಪ್ತಿ ಅವರಿಗೆ ಇರಲಿಲ್ಲವೆಂತಲೇ ಹೇಳಬೇಕು. ಗುವಾಹಟಿ ವಿಶ್ವವಿದ್ಯಾಲಯದಲ್ಲಿ ಬುಡಕಟ್ಟು ಸಮೂಹದವರ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಮಹಾಶ್ವೇತಾ ದೇವಿಯವರು ಕರ್ನಾಟಕದಲ್ಲಿ ಬರಗೂರು ರಾಮಚಂದ್ರಪ್ಪನವರು ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಪ್ರಕಟಿಸಿದ್ದ ಬುಡಕಟ್ಟು ಮಾಹಿತಿಯ 'ಪ್ರತಿ ಸಂಸ್ಕೃತಿ' ಪುಸ್ತಕಗಳ ಮಹತ್ವವನ್ನು ಕೊಂಡಾಡಿದವರು, ವಿಚಾರ ಸಂಕಿರಣದ ನಂತರ ಭೈರಪ್ಪನವರ ಕೃತಿಗಳ ವಿಚಾರವೂ ಗೊತ್ತಿರುವಂತೆ ಮಾತಾಡಿದರು.

* * *

ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ ಅವರು ತಮ್ಮ ಮೊದಲ ಚಲನಚಿತ್ರ 'ಮುನ್ನುಡಿ'ಯನ್ನು ನಿರ್ದೇಶಿಸಿ ಕೆ.ಆರ್. ಮಾರ್ಕೆಟ್ ಬಳಿಯ ಸಿನಿಮಾ ಟಾಕೀಸಿನಲ್ಲಿ ಬಿಡುಗಡೆ ಮಾಡಿಸಿ, ಅದನ್ನು ವೀಕ್ಷಿಸಲು ಭೈರಪ್ಪನವರನ್ನು ಕರೆದುಕೊಂಡು ಬರಲು ಸಾಧ್ಯವೇ ಎಂದರು. ನಾನು ಭೈರಪ್ಪನವರಿಗೆ ಸಿನಿಮಾ ವೀಕ್ಷಣೆಯ ಪೀಠಿಕೆಯ ಮಾತಾಗಿ, 'ಒಂದು ಕನ್ನಡ ಸಿನಿಮಾ ನೋಡಲು ಸಾಧ್ಯವೇ?' ಎಂದೆ. ಅವರು 'ಯಾವತ್ತೂ ನಾನು ಟಾಕೀಸಿಗೆ ಹೋಗಿ ಕೂತು, ಅದರಲ್ಲೂ ಕನ್ನಡ ಸಿನಿಮಾ ನೋಡಿಯೇ ಇಲ್ಲವಲ್ಲ' ಎಂದರು. 'ನಿಮ್ಮ ಬಾಲ್ಯ ಕಾಲದಲ್ಲಿ?' ಎಂದೆ. 'ಅಯ್ಯೋ, ಸಿನಿಮಾ ಟಾಕೀಸಿನ ಹೊರಗೆ ಗೇಟಿನಲ್ಲಿ ನಿಂತಿದ್ದೇನೇ ಹೊರತು, ಸಿನಿಮಾ ನೋಡುವ ಆಸೆ ಎಷ್ಟೇ ಇದ್ದರೂ ಒಳಗೆ ಇಣುಕಲಾಗುತ್ತಿರಲಿಲ್ಲ, ಆದರೂ 'ಚಂದ್ರಲೇಖಾ' ಎಂಬ ಒಂದೇ ಒಂದು ತೆಲುಗು ಸಿನಿಮಾವನ್ನು ಐದಾರು ಬಾರಿ ನೋಡಿದ್ದೆ, ಅದರ ಹಾಡು ಸಂಭಾಷಣೆಗಳೆಲ್ಲ ಬಾಯಿಗೆ ಬರುತ್ತಿದ್ದವು. ಆಮೇಲೆ ನಾನು ಓದಿ ಬೇರೆ ಬೇರೆ ದೇಶಗಳಿಗೆ ಹೋಗತೊಡಗಿ, ಅಲ್ಲಿಯ ಚಿತ್ರಮಂದಿರಗಳಲ್ಲಿ ಜಗತ್ತಿನ ಶ್ರೇಷ್ಠ ಸಿನಿಮಾ, ನಾಟಕಗಳನ್ನೆಲ್ಲಾ ನೋಡುತ್ತಲೇ ಬಂದಿದ್ದೇನೆ' ಎಂದರು. 'ಟೈಟಾನಿಕ್ ಸಿನಿಮಾ' ಎಂದೆ. 'ಆ ಸಿನಿಮಾ ಮತ್ತು ಅದರ ಎಫೆಕ್ಟ್ ಹೇಗೆ ಅಂತ ಎರಡು ಬೇರೆ ಬೇರೆ ಟಾಕೀಸುಗಳಲ್ಲಿ ನೋಡಿದ್ದೇನೆ' ಎಂದರು. ಹಾಗೂ ಹೀಗೂ ಭೈರಪ್ಪನವರು, 'ಮುನ್ನುಡಿ' ಸಿನಿಮಾ ನೋಡಿ, ಆ ಹೊತ್ತು ಟಾಕೀಸಿಗೆ ಬಂದಿದ್ದ ಶೇಷಾದ್ರಿ ಅವರನ್ನು ಭೇಟಿ ಮಾಡಿದವರು, ಆಮೇಲೆ ಅವರದೇ 'ಡಿಸೆಂಬರ್ 1' ಸಿನಿಮಾವನ್ನೂ ನೋಡಿದರು. ತದನಂತರ ಕೇಂದ್ರ ಸಾಹಿತ್ಯ ಅಕಾಡೆಮಿಯವರು ತಮ್ಮ ಸಾಕ್ಷ್ಯಚಿತ್ರವನ್ನೂ ಮತ್ತು ಅವರ ಕಾದಂಬರಿಗಳ ಧ್ವನಿಮುದ್ರಣ ಓದನ್ನೂ ಶೇಷಾದ್ರಿಯವರೇ ಮಾಡಬೇಕೆಂದರು. ಅಷ್ಟು ಹೊತ್ತಿಗೆ ಶೇಷಾದ್ರಿಯವರ ಬಹುತೇಕ ಎಲ್ಲಾ ಚಿತ್ರಗಳಿಗೆ ರಾಷ್ಟ್ರಪ್ರಶಸ್ತಿ ಬಂದಿತ್ತು.

ಭೈರಪ್ಪನವರಿಗೆ ಬಂದ ಪ್ರಶಸ್ತಿಗಳಿಗೆ ಲೆಕ್ಕವಿಲ್ಲ. 'ಸರಸ್ವತಿ ಸಮ್ಮಾನ್' ಬಂದಾಗ ಭೈರಪ್ಪನವರಿಗೆ ಎಲ್ಲೆಡೆ ಆದ ಸನ್ಮಾನಗಳಿಗಿಂತ ಅವರು ಓದಿದ ಶಾರದಾ ವಿಲಾಸ ಕಾಲೇಜಿನಲ್ಲಿ ಸಂದ ಗೌರವ ಸಂತೋಷ ತಂದಿತ್ತು. ಆ ಹೊತ್ತಿನ ಕಾರ್ಯಕ್ರಮ ಮುಗಿದ ನಂತರ ಆಡಳಿತ ಮಂಡಳಿಯವರೊಂದಿಗೆ ಮಾತನಾಡುತ್ತಾ ಭೈರಪ್ಪನವರು ಒಂದು ಚೆಕ್ ನೀಡಿ, ಪ್ರತೀವರ್ಷ ಈ ಮೊತ್ತದಿಂದ ಬಂದ ಬಡ್ಡಿಯ ಹಣವನ್ನು ಯಾವುದೇ ತಳವರ್ಗ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸಹಾಯಧನವಾಗಿ ನೀಡಬೇಕೆಂದರು. ಸಾಮಾನ್ಯವಾಗಿ ಭೈರಪ್ಪನವರು ಯಾವುದೇ ಪ್ರಶಸ್ತಿಯ ಹಣವನ್ನು ಗಂಟು ಹಾಕದೇ ಅದನ್ನು ಕೊಳ್ಳೇಗಾಲದಿಂದ ಹಿಡಿದು ಬೆಳಗಾವಿಯವರೆಗೆ ಕೇಳಿದ ವಿದ್ಯಾರ್ಥಿಗಳಿಗೆ ಸಹಾಯ ನೀಡುತ್ತಿದ್ದುದು ಉಂಟು. ಆದರೆ, ವಿದ್ಯಾರ್ಥಿಯ ಕೋರಿಕೆ ಸಮರ್ಪಕವಾಗಿಯೂ, ಸಾಕ್ಷಿ ಸಮೇತವಾಗಿಯೂ ಇರಬೇಕಿತ್ತು.

ಭೈರಪ್ಪನವರ ಮಾತುಕತೆಯಲ್ಲಿ ಯಾವಾಗಲೂ ನೆಹರೂ ಕುಟುಂಬದ ಬಗ್ಗೆ ತಾತ್ಸಾರದ ಮಾತುಕತೆಗಳಿರುತ್ತಿದ್ದವು. ಒಮ್ಮೆ 'ನಿಮಗೆ ಪ್ರಧಾನಿ ಮೋದಿ ಅವರ ಪರಿಚಯ ಹೇಗೆ?' ಎಂದೆ. 'ಗುಜರಾತಿನಲ್ಲಿದ್ದಾಗ ಒಂದೆರಡು ಕಾರ್ಯಕ್ರಮಗಳಲ್ಲಿ ಅವರ ಜೊತೆ ಭಾಗವಹಿಸಿದ್ದೆ' ಎಂದರು.

